ಶ್ರೀ ಎಚ್. ಎಂ. ಚನ್ನಬಸಪ್ಪ.—ಲೈನ್ ಎಸ್ಟಿಮೇಟ್ ಮಾತ್ರ ಅಗಿರತಕ್ಕದ್ದು ಡಿಟೇಲ್ಡ್ ಎಸ್ಟಿಮೇಟ್ ಮಾಡಿ ಎಂದು ಹುಕುಂ ಮಾಡಲಾಗುತ್ತದೆ. ಅದು ಬಂದ ಮೇಲೆ ವಿಚಾರ ಪರಿಶೀಲನೆ ಮಾಡುತ್ತೇವೆ.

Modification of Estimate of Hemavathy Reservoir Project

196. Sri B. BYRAPPAJI (Turuvekere).—

Will the Minister of State for Major Irrigation be pleased to state:—

(*a*) the taluks to which water is proposed to be supplied from Hemavathy Reservoir Project ;

(*b*) the extent of lands coming under irrigation in each taluk ;

(*c*) whether it has come to the notice of Government that it is desirable to modify the present estimate of the canal to extend irrigation from Hemavathy Reservoir to Tiptur, Turuvekere, Gubbi, Kunigal, and Tumkur of Tumkur District and Nagamangala of Mandya District ?

Sri H. N. NANJE GOWDA (Minister of State for Major Irrigation).—

(*a*) (i) Hassan Taluk
(ii) Holenarasipur Taluk
(iii) Channarayapatna Taluk
(iv) K. R. Pet Taluk
(v) Pandavapura Taluk
(vi) Arkalgud Taluk.

(*b*) *Names of Taluks.*—

		Acres
(i) Hassan Taluk	...	2,177
(ii) Holenarasipur Taluk	...	20,780
(iii) Channarayapatna Taluk	...	24,550
(iv) K. R. Pet Taluk	...	35,000
(v) Pandavapura Taluk	...	13,537
(vi) Arkalgud Taluk	...	3,956
Total	...	1,00,000

(*c*) Yes. The proposal is being examined.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತಾವು ಹೇಳಿದ್ದೀರಿ, ಹೇಮಾವತಿ ಅಣೆಕಟ್ಟಿನ ನಾಲೆಯನ್ನು ತುಮಕೂರು ಜಿಲ್ಲೆಯ ತಿಪಟೂರು, ತುರುವೇಕೆರೆ, ಗುಬ್ಬಿ, ಕುಣಿಗಲ್ ಮತ್ತು ತುಮಕೂರು ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲಕ್ಕೆ ಮುಂದುವರಿಸಿ ನೀರನ್ನು ಒದಗಿಸಲು ಸಲಹೆ ಬಂದಿದೆ; ಪರಿಶೀಲನೆ ಮಾಡುತ್ತಿದ್ದೇವೆ ಎಂದು. ಇದು ಬಹಳ ವರ್ಷಗಳಿಂದ ಕೇಳುತ್ತಾ ಇರತಕ್ಕ ವಿಚಾರ, ತಕ್ಷಣ ಹುಕುಂ ಮಾಡಿದರೆ, ಆದಷ್ಟು ಬೇಗ ಕಾರ್ಯರೂಪಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ. ಕೃಷ್ಣರಾಜಪೇಟೆ ಮತ್ತು ಇನ್ನು ಕೆಲವು ತಾಲ್ಲೂಕುಗಳಿಗೆ ಮಾತ್ರ ಇರತಕ್ಕ ಈ ಚಾನಲ್ ಮುಂದಕ್ಕೆ ಬರಬೇಕಾದರೆ ಇದರ ಒಂದು ಪ್ರಮಾಣ ಬದಲಾಯಿಸಬೇಕಾಗುತ್ತದೆ. ಆದ್ದರಿಂದ ಒಂದೇ ಸಾರಿ ಈ ತಾಲ್ಲೂಕುಗಳಿಗೂ ಕೂಡ ನೀರು ಬರುವ ರೀತಿಯಲ್ಲಿ ಆದಷ್ಟು ಬೇಗ ಈ ಚಾನಲ್ ಏನಿದೆ ಇದರ ಪುನರ್ ಎಸ್ಟಿಮೇಟ್ ಮಾಡಿ ಕೆಲಸ ಮಾಡುವುದಕ್ಕೆ ಪ್ರಾರಂಭಮಾಡುತ್ತೀರಾ ?

† ಎಚ್. ಎನ್. ನಂಜೇಗೌಡ.—ಇದನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಟಿ. ಎಂ. ಮಂಜುನಾಥ.—ಹೇಮಾವತಿ ಯೋಜನೆಯಿಂದ ಎಷ್ಟು ಎಕರೆ ನೀರಾವರಿ ಆಗುವುದಕ್ಕೆ ಅವಕಾಶವಿದೆ? ನೀರಿನ ಹಂಚಿಕೆಯಲ್ಲಿ ಅಸಮಾನತೆ ಇದೆ ಅದನ್ನು ಸರಿಪಡಿಸುತ್ತೇವೆಂದು ಹೇಳಿದ್ದೀರಿ. ತಾವು ಕೊಟ್ಟಿರತಕ್ಕ ನೀರಾವರಿ ಯೋಜನೆಗಳ ಪಟ್ಟಿಯನ್ನು ನೋಡಿದರೆ, ಆ ನೀರಾವರಿ ಯೋಜನೆಗಳು ಸಂಪೂರ್ಣವಾಗಿಲ್ಲ. ಆದ್ದರಿಂದ ಈ ಒಂದು ಯೋಜನೆಯನ್ನು ಹೇಮಾವತಿ ಯೋಜನೆಯಲ್ಲಿ ಅಳವಡಿಸುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಮೊದಲನೆಯ ಪ್ರಶ್ನೆ, ಎಷ್ಟು ಎಕರೆ ನೀರಾವರಿಯಾಗುತ್ತದೆ ಎನ್ನುತಕ್ಕಂಥಾದ್ದು. ಮೊದಲನೆಯ ಹಂತದಲ್ಲಿ 1,500 ಎಕರೆ ನೀರಾವರಿ ಪ್ರದೇಶ ಮಾಡಬೇಕು ಎಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಎರಡನೆಯದು, ಅನೇಕ ವಿಷಯಗಳು ಶ್ರೀ ಬೈರಪ್ಪಾಜಿಯವರು ಕೇಳಿವ ಪ್ರಶ್ನೆಯಲ್ಲಿ ಬಂದಿವೆ. ಅದನ್ನು ಪರಿಶೀಲನೆ ಮಾಡಿ ವಿವರವಾಗಿ ನರ್ವೆಯಾದನಂತರ ತಿಳಿಸಲಾಗುತ್ತದೆ. ಈಗ ಅದನ್ನು ತಿಳಿಸುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಇದು ಮಹತ್ತರವಾದ ವಿಚಾರ, ತಡಮಾಡಿದರೆ ಅನಾನುಕೂಲವಾಗಬಹುದು. ಈಗ ಅಲ್ಲಲ್ಲಿ ಮಾಡುತ್ತಾ ಇರತಕ್ಕ ನಾಲೆಯ ಜೊತೆಗೆ ಇದನ್ನು ಸೇರಿಸಿಕೊಂಡು ಮಾಡಿದರೆ ಕಾಸ್ಟ್ ಎಸ್ಟಿಮೇಟ್ ಅಂದಾಜು ಕಡಿಮೆಯಾಗುತ್ತದೆ. ಜೊತೆಗೆ ಒಂದೇ ಸಾರಿ ಮಾಡುವುದರಿಂದ ಅಲ್ಲ ಮಾಡುತ್ತಾ ಇರತಕ್ಕ ಚಾನರ್ ಬದಲಾವಣೆ ಮಾಡುವ ಅವಕಾಶ ಇರುವುದಿಲ್ಲ. ಒಂದೇ ಸಾರಿ ಮಾಡುವುದು ಸೂಕ್ತವಾಗಿರುತ್ತದೆ. ಆದ್ದರಿಂದ ತ್ವರಿತವಾಗಿ ಈ ಒಂದು ಡಿವಿಷನ್ ನೇಮಕ ಮಾಡಿ ಈ ಕೆಲಸಕ್ಕೆ ಅಂದಾಜು ತಯಾರು ಮಾಡಿಸಿ ನೀರು ಬರುವ ಹಾಗೆ, ಮನಸ್ಸು ಮಾಡಿ ಕೆಲಸ ಪ್ರಾರಂಭ ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಲು ಪ್ರಯತ್ನ ಮಾಡುತ್ತೀರಾ. ?

ಶ್ರೀ ಎಚ್. ಎನ್. ನಂಜೇಗೌಡ.—ಶ್ರೀಮಾನ್ ಬೈರಪ್ಪಾಜಿಯವರಿಗೆ ಇರುವ ಕಾತುರ ಸರ್ಕಾರಕ್ಕೂ ಇದೆ. ಸರ್ಕಾರ ಈ ದೆಸೆಯಲ್ಲಿ ಏನು ಮಾಡುವುದಕ್ಕೆ ಸಾಧ್ಯ ಎಂಬುದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ. ಇರುವ ಟೊಪೋಸ್ಶೀಟ್ ಮೇಲೆ ಮಾಡಿರುವ ವರದಿ ಪ್ರಕಾರ ಹೇಳಲಾಗಿದೆ. ಇದನ್ನು ಕಾರ್ಯತಃ ಮಾಡಬೇಕು ಎಂದು ಸರ್ಕಾರ ತೀವ್ರವಾಗಿ ಆಲೋಚನೆ ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಹಾಸನ ತಾಲ್ಲೂಕಿನಲ್ಲಿ ಹೇಮಾವತಿ ನಾಲೆ ಹೋಗುವ ಕಡೆ 2—3ಕಡೆ ರಿಡ್ಜ್‌ಸಿಕ್ಕುತ್ತದೆ. ಅಲ್ಲಿ ಹೈಪರ್ ಪಂಪು ಹಾಕಿದರೆ ಪ್ರತಿವರ್ಷ ಕ್ಷಾಮಕ್ಕೆ ತುತ್ತಾಗಿರುವ ಪ್ರದೇಶದಲ್ಲಿ ನೀರಾವರಿ ಆಗುವ ಅವಕಾಶವಿದೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಲಿಫ್ಟ್ ಇರಿಗೇಷನ್ ಪ್ರಶ್ನೆ ಎಲ್ಲಿ ಬರುತ್ತದೆ ಎಂದರೆ ಗ್ರಾವಿಟಿ ಇರಿಗೇಷನ್ನಿನಲ್ಲಿ ಜಮೀನು ಸಿಕ್ಕದೆ ಇದ್ದಂಥ ಕಾಲದಲ್ಲಿ, ಖರ್ಚು ಕಡಿಮೆಯಲ್ಲಿ ಲಿಫ್ಟ್ ಇರಿಗೇಷನ್ ಆಗುವ ಪ್ರಶ್ನೆ ಇದ್ದರೆ, ಆಗ ಪರಿಶೀಲನೆ ಮಾಡುತ್ತೇವೆ. ಕಾಂಟೂರು ಹೋಗುವ ಕಡೆ ನೀರು ಕೊಡುವುದಕ್ಕೆ ಸಾಧ್ಯ, ಬೇರೆ ಕಡೆ ಸಾಧ್ಯವಿಲ್ಲದ ಪ್ರಯುಕ್ತ ಈ ಪ್ರಶ್ನೆ ಗಮನದಲ್ಲಿ ಇಲ್ಲ. ನಿಧಾನವಾಗಿ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹೇಮಾವತಿ ಅಣೆಕಟ್ಟಿನಿಂದ ನೀರನ್ನು ತಿಪಟೂರ್, ನಾಗಮಂಗಲ ತುರುವೇಕೆರೆ ಮತ್ತು ಕುಣಿಗಲ್ ತಾಲ್ಲೂಕಿನಲ್ಲಿ ಬಹುತೇಕ ಪ್ರದೇಶಗಳಿಗೆ ಒದಗಿಸತಕ್ಕಂಥ ಯೋಜನೆಯನ್ನು ಪರಿಶೀಲನೆ ಮಾಡುತ್ತಿದ್ದಾರೆಂದು ಹೇಳುತ್ತಾರ ಈ ಭಾಗದಲ್ಲಿ ಅನಾವೃಷ್ಟಿ ಉಂಟಾಗಿ ಅನೇಕ ರೈತರಿಗೆ ಬರ ಬಂದು ರೈತರಿಗೆ ಬಹಳ ತೊಂದರೆ

ಯಾಗಿರುವುದರಿಂದ, ನಾಲೆಗಳಿಂದ ಈ ಕಡೆಗೆ ನೀರನ್ನು ಒದಗಿಸತಕ್ಕ ಕೆಲಸ ಮಾಡಬೇಕು. ಅಲ್ಲದೆ ಮಾರ್ಕೊನಹಳ್ಳಿಗೆ ನೀರು ಒದಗಿಸದೇ ಇರುವುದರಿಂದ ಮತ್ತು ಅಲ್ಲಿ ಸೀಪೇಜ್ ವಾಟರ್ ಬರುವುದರಿಂದ ಇಲ್ಲಿಗೆ ಟಾಪ್‌ಪ್ರಿಯಾರಿಟಿ ಕೊಟ್ಟು ಇದನ್ನು ತಕ್ಷಣ ಪರಿಶೀಲನೆ ಮಾಡಿ ಕಾರ್ಯಗತ ಮಾಡುವುದಕ್ಕೆ ಅಭಯ ಕೊಡುತ್ತೀರಾ?

ಶ್ರೀ ಎಚ್. ಎನ್. ನಂಜೇಗೌಡ.—ಈ ಹೇಮಾವತಿ ನೀರನ್ನು ಮೊದಲು ಕಾವೇರಿ ಬೇಸಿನ್ನಲ್ಲಿ ಉಪಯೋಗ ಆಗತಕ್ಕ ಪರಿಸ್ಥಿತಿ ಅವಲೋಕಿಸಿ, ಅಲ್ಲಿ ಆಗಿ ಉಳಿದ ಮೇಲೆ ಕಾವೇರಿ ಬೇಸಿನ್ ಬಿಟ್ಟು ಬೇರೆ ಕಡೆಗೆ ತೆಗೆದುಕೊಂಡು ಹೋಗುವುದು ಆಲೋಚನೆ ಮಾಡಬೇಕಾಗುತ್ತದೆ.

ಈ ಕಾವೇರಿ ಬೇಸಿನ್‌ಗೆ ಸೇರಿರತಕ್ಕ ಪ್ರದೇಶಗಳು ಯಾವು ಯಾವುವು ಎಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಅದನ್ನು ಪರಿಶೀಲನೆ ಮಾಡಿದ ಮೇಲೆ ಬೇಸಿನ್‌ನಿಂದ ಹೊರಗಡೆ ತೆಗೆದುಕೊಂಡು ಹೋಗುವ ಆಲೋಚನೆ ಮಾಡಲಾಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಹಾಸನ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯ ಇಲ್ಲ. ಹೇಮಾವತಿ ನೀರನ್ನು ಹಾಸನಕ್ಕೆ ಬಿಡುವ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎನ್. ನಂಜೇಗೌಡ.—ನೀರು ಹಳ್ಳಕ್ಕೆ ಹರಿಸುತ್ತೇವೆ. ದಿಬ್ಬಕ್ಕೆ ಹರಿಸುವುದಕ್ಕೆ ಆಗುವುದಿಲ್ಲ. ಕಾನ್‌ಟೂರ್ ಎಲ್ಲೆಲ್ಲಿ ಹೋಗುತ್ತದೆ ಅಲ್ಲಿ ನೀರಾವರಿ ಮಾಡುವುದಕ್ಕೆ ಅವಕಾಶ ವಾಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಚನ್ನರಾಯಪಟ್ಟಣಕ್ಕೆ ನೀರು ಬಿಡುತ್ತೀರಾ? ಪಕ್ಕದಲ್ಲಿ ಗಂಡಸಿ ಹೋಬಳಿ ಇದೆ.

ಶ್ರೀ ಎಚ್. ಎನ್. ನಂಜೇಗೌಡ.—ಅದು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಆದಷ್ಟು ತೀವ್ರವಾಗಿ ಸರ್ಕಾರ ಪ್ರಯತ್ನ ಮಾಡುತ್ತಿವೆ ಎಂದು ಆಶ್ವಾಸನೆ ಕೊಟ್ಟಿದ್ದೀರಿ. ತುಮಕೂರು ಜಿಲ್ಲೆ ಕ್ಷಾಮಪೀಡಿತ ಪ್ರದೇಶವಾದ್ದರಿಂದ ಮಾಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅಶ್ವಾಸನೆ ಕೊಡಿಸಿದ್ದೀರಿ. ನನ್ನ ಕೋರಿಕೆ ಇಷ್ಟೇ. ಹಾಸನ ಜಿಲ್ಲೆಗೆ ಕೊಡುವುದು ಸಂತೋಷ. ಕೊಟ್ಟರುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಪ್ರತಿವರ್ಷ ಕ್ಷಾಮದಿಂದ ನರಳುತ್ತಾ ಇರತಕ್ಕ ಲಕ್ಷಾಂತರ ಜನ ತೊಂದರೆಗೆ ಈಡಾಗಿರತಕ್ಕ ಪ್ರದೇಶಗಳಿಗೆ ತ್ವರಿತವಾಗಿ ನೀರನ್ನು ಒದಗಿಸಿ, ಶಾಶ್ವತವಾದಂಥ ಕ್ಷಾಮ ಪರಿಹಾರವನ್ನು ಮಾಡುವುದಕ್ಕೆ ಕಾರ್ಯಕ್ರಮವನ್ನು ಬೇಗ ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತಾ ಈ ಕಾರಣದಿಂದ ಬೇಗ ಮಾಡುವುದಕ್ಕೆ ಏನು ಕಾರ್ಯ ಕೈಗೊಳ್ಳುತ್ತೀರಾ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಪ್. ಎನ್. ನಂಜೇಗೌಡ.—30 ಟಿ. ಎಂ. ಸಿ. ಎಫ್. ಟಿ. ನೀರು ಉಪಯೋಗಿಸುವುದಕ್ಕೆ ಸರ್ಕಾರ ಈ ಯೋಜನೆಯಲ್ಲಿ ಕ್ರಮ ಕೈಕೊಂಡಿದೆ. ಸಮಸ್ಯೆಯನ್ನು ಮದ್ರಾಸ್ ಕೇರಳ ಮತ್ತು ನಾವು ಎಲ್ಲರೂ ಸೇರಿ ಪುನಃ ಬಗೆಹರಿಸಬೇಕಾಗಿದೆ. ನಮಗೆ ಎಷ್ಟು ನೀರು, ಬೇರೆ ರಾಜ್ಯಗಳಿಗೆ ಎಷ್ಟು ನೀರು ಎಂದು ಖಚಿತವಾಗಿ ಗೊತ್ತಾಗಿಲ್ಲ. ಇದೆಲ್ಲಾ ನೋಡಿ ಮುಂದಿನ ಕೆಲಸ ಕೈಗೊಳ್ಳಬೇಕಾಗಿದೆ. ನೀರು ಎಷ್ಟು ಬರುತ್ತದೆಯೋ ಅದರಂತೆ ಯೋಜನೆ ರೂಪುಗೊಳಿಸಬೇಕು. ಇದನ್ನು ಪರಿಶೀಲಿಸುತ್ತೇವೆಂದು ಭರವಸೆ ಕೊಟ್ಟಿದ್ದೇವೆ ಅಷ್ಟುಮಾತ್ರ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ನೀರನ್ನು ಉಪಯೋಗಿಸಿ ಹೆಚ್ಚಿಗೆ ಉಳಿದರ ಬೇರೆ ಕಡೆಗೆ ಕೊಡುವ ಯೋಚನೆ ಮಾಡುತ್ತೇವೆ ಎಂದು ತಿಳಿಸಿದರು. ಈಗ ಏನು ತಾವು ಕೊಟ್ಟಿದ್ದೀರಿ ಆ ಪ್ರದೇಶಗಳಲ್ಲಿ ನುಮಾರು ಒಂದು ಲಕ್ಷ ಎಕರೆ ನೀರಾವರಿಯಾಗುತ್ತದೆ. ಇನ್ನು ಬೇರೆ ಪ್ರದೇಶಗಳಲ್ಲಿ ನೀರಾವರಿ ಸೌಕರ್ಯ ಒದಗಿಸಿಕೊಡಬೇಕಾದರೆ, ಡ್ಯಾಮ್ ಕ್ಯಾಪಾಸಿಟಿ ಇನ್‌ಕ್ರೀಸ್ ಮಾಡಬೇಕಾಗುತ್ತದೆ. ಅದಕ್ಕೆ ಸರ್ಕಾರ ಆಲೋಚನೆ ಮಾಡುತ್ತಾರೆಯೇ? ಅವೈಲಬಿಲಿಟಿ ಆಫ್ ವಾಟರ್ ಅಟ್ ದಟ್ ಪಾಯಿಂಟ್ ಅದನ್ನು ಪರಿಶೀಲನೆ ಮಾಡಿ ಬೇರೆ ಕಡೆಗೆ ನೀರನ್ನು ಹರಿಸುವ ಪ್ರಯತ್ನಕ್ಕೆ ಕೈಹಾಕುತ್ತೀರಾ? ಎಂದು ಕೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಹೇಮಾವತಿ ಡ್ಯಾಮ್ ಕಟ್ಟಿರುವ ಡಿಸೈನ್ 34 ಟಿ. ಎಂ. ಸಿ.ಎಫ್.ಟಿ. ನೀರು ಉಪಯೋಗಿಸುವುದಕ್ಕೆ ಮಾತ್ರ. ತಾತ್ಕಾಲಿಕವಾಗಿ 70 ಟಿ. ಎಂ.ಸಿ ಎಫ್. ಟಿ. ನೀರನ್ನು ಉಪಯೋಗಿಸಲು ಕಟ್ಟೆ ಬದಲಾವಣೆ ಮಾಡಬೇಕಾಗಿಲ್ಲ. ಬೇಸಿನ್‌ನಲ್ಲಿ ಉಪಯೋಗಿಸ ಬಹುದು. ಅಚ್ಚುಕಟ್ಟನ್ನು ಕೊಟ್ಟಿದ್ದು 22 ಟಿ. ಎಂ. ಸಿ. ಎಫ್. ಟಿ. ಇನ್ನೂ 8 ಟಿ.ಎಂ.ಸಿ.ಎಫ್.ಟಿ.

(ಶ್ರೀ ಎಚ್. ಎನ್. ನಂಜೇಗೌಡ)

ನೀರು ಇದೆ. ಒರಿಜನಲ್ ಪ್ರಾಜೆಕ್ಟ್ ರಿಪೋರ್ಟಿನಲ್ಲಿ ಬೇಸಿನ್‌ನಲ್ಲಿ ಟ್ಯಾನಲ್ ಮಾಡಿ ಮಾಡತಕ್ಕ ಒಂದು ಆಲ್ಟರ್‌ನೇಟೀವ್ ಪ್ಲಾನ್ ಇಟ್ಟುಕೊಂಡಿದ್ದೇವೆ. 2ನೇ ಹಂತದಲ್ಲಿ ಇದರ ಜೊತೆಗೆ ಯಾವ ಯಾವುದು ತೆಗೆದುಕೊಳ್ಳಬೇಕು ಎಂದು ಸರ್ಕಾರ ಸೂಕ್ತ ಯೋಚನೆ ಮಾಡುತ್ತದೆ.

Distribution of Gairan, Parampok and Waste Land to S. C./ S. T.. People in 'Gulbarga District

226. Sri MALLIKARJUN (Gurmitkal).—

Will the Minister for Revenue be pleased to state :—

(*a*) the period within which the "Gairan, Parampok and Waste Lands" in Gulbarga District which is now cultivated by the poor Scheduled Castes and Scheduled Tribes people unauthorisedly will be distributed to them ;

(*b*) the criteria on which the said lands will be distributed among the said people ;

(*c*) whether Government has received any complaints that the Patwaries of Gulbarga District have made some wrong entries in pahani patrika about the land held by Scheduled Castes/Scheduled Tribes people as being under cultivation ;

(*d*) the total area of Government land under unauthorised cultivation in Gulbarga District ?

Sri N. HUTCHAMASTHY GOWDA (Minister for Revenue).—

(*a*) It is proposed to have all cases of unauthorised occupation of lands disposed of by 31st March 1973.

(*b*) Confirmation of lands under unauthorised cultivation prior to 1st July 1968 will be done in accordance with the provisions of Mysore Land Revenue (Regularisation of Unauthorised Occupation of Lands) Rules, 1970.

(*c*) No.

(*d*) 23,906 acres 11 guntas.

ಶ್ರೀ ಮಲ್ಲಿಕಾರ್ಜುನ.—ತಮ್ಮ ಉತ್ತರದಲ್ಲಿ ಮೊದಲನೆ ಪ್ರಶ್ನೆಗೆ ಉತ್ತರವಾಗಿ 31ನೇ ಮಾರ್ಚ್ 1973 ಎಂದು ಹೇಳಿದ್ದೀರಿ. ಆದರೆ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ ಪ್ರಾವಿಷನ್ ಪ್ರಕಾರ ಗೈರಾನ್ ಜಮೀನನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಸಾಗುವಳಿ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್ ಜನರು ಕಲ್ಪವೇಟ್ ಮಾಡಿದ್ದಾರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗೈರಾನ್ ಲ್ಯಾಂಡ್ ಕೂಡ ಅನ್‌ಆಥರೈಸ್ಡ್ ಆಕ್ಯೂಪೇಷನ್ ಆಗಿದ್ದರ ಕೆಲವು ನಿಯಮಗಳು ಇವೆ. 1970ನೇ ಇಸವಿಯಲ್ಲಿ ಮಾಡಿರುವ ನಿಯಮಗಳ ಪ್ರಕಾರ ಇದನ್ನು ಕೊಡುವುದಕ್ಕೆ ಯೋಚನೆ ಮಾಡುತ್ತೇನೆ.